ಶನಿವಾರ, 22 ಡಿಸೆಂಬರ್ 2018 | ಪುಟಗಳು: 10+6+4(KSD6) | ಬೆಲೆ: ₹ 5.00
www.vijaykarnataka.com
ಸಂಪುಟ: 18 | ಸಂಚಿಕೆ: 146
VK
ವಿಜಯ ಕರ್ನಾಟಕ



ದೇಶದೆಲ್ಲೆಡೆ ಹವಾ ಸೃಷ್ಟಿಸಿದ ಕೆಜಿಎಫ್: ಸಿನಿಮಾ ಹೇಗಿದೆ? ಚಿತ್ರ ವಿಮರ್ಶೆ P05



ಸಂಸತ್ ಅಧಿವೇಶನದಲ್ಲಿ ಐದಕ್ಕಿಂತ ಹೆಚ್ಚು ಸಲ ಸದನದ ಬಾವಿಗಿಳಿದು ಪ್ರತಿಭಟಿಸಿದರೆ ಸದಸ್ಯತ್ವ ರದ್ದತಿಗೆ ಶಿಫಾರಸು P08

ಜೀವಿತಾವಧಿ ಶಿಕ್ಷೆಗೆ ಒಳಗಾದ ಸಜ್ಜನ್‌ಕುಮಾರ್ ಶರಣಾಗತಿಗೆ ಹೆಚ್ಚಿನ ಅವಕಾಶ ನಿರಾಕರಣೆ P0

# ಕರಾವಳಿ ಜನಪದ ವೈಭವ ತೆರೆದಿಟ್ಟ ಉತ್ಸವ

## 25ಕ್ಕೂ ಅಧಿಕ ಕಲಾತಂಡಗಳು ಭಾಗಿ | ಮೀನುಗಾರಿಕೆ ಇಲಾಖೆಯ ಏಕೈಕ ಟ್ಯಾಬ್ಲೊ

**ವಿಕ ಸುದ್ದಿಲೋಕ** ಮಂಗಳೂರು

ತಾಸೆಯ ಪೆಟ್ಟಿಗೆ ಹುಲಿ ಕುಣಿತ, ಚೆಂಡೆ ಬಡಿತಕ್ಕೆ ಯಕ್ಷಗಾನ ಕುಣಿತ, ದೇವಾಲಯ ತಂಡಗಳ ವಾದ್ಯ ನಿನಾದಕ್ಕೆ ಹೆಜ್ಜೆ ಹಾಕುವ ತಟ್ಟಿರಾಯ, ಬ್ಯಾಂಡ್ ವಾದ್ಯ ತಂಡಗಳ ಸಂಗೀತಕ್ಕೆ ಶಿಲ್ಪಕಲಾ ಗೊಂಬೆಗಳ ನಾಟ್ಯವೈಭವ.

ಇದು ನಗರದ ರಾಜಬೀದಿಯಲ್ಲಿ ಶುಕ್ರವಾರ ಸಂಜೆ ನಡೆದ ಕರಾವಳಿ ಉತ್ಸವದ ಉದ್ಘಾಟನೆ ಸಮಾರಂಭದ ಮೆರವಣಿಗೆಯಲ್ಲಿ ಗಮನ ಸೆಳೆದ ಕಲಾತಂಡಗಳು. ಮೆರವಣಿಗೆಯಲ್ಲಿ 25ಕ್ಕೂ ಅಧಿಕ ಕಲಾತಂಡಗಳು ಭಾಗವಹಿಸಿ, ಈ ನೆಲದ ಸಂಸ್ಕೃತಿ, ಜಾನಪದ ಸೊಗಡನ್ನು ಒಂದು ಹಂತಕ್ಕೆ ಪ್ರಸ್ತುತಪಡಿಸುವಲ್ಲಿ ಯಶಸ್ವಿಯಾದವು.

ಚಿಕ್ಕಮಗಳೂರು ತಂಡದ ವೀರಗಾಸೆ, ಶಿವಮೊಗ್ಗದ ಡೊಳ್ಳು ಕುಣಿತ, ಹಾವೇರಿಯ ಪುರವಂತಿಕೆ, ಧಾರವಾಡದ ಜಗ್ಗಲಿಗೆ ಮೇಳ, ತುಮಕೂರಿನ ಸೋಮನ ಕುಣಿತ, ರಾಮನಗರದ ಪೂಜಾ ಕುಣಿತ, ಹಾವೇರಿಯ ಬೇಡರ ಕುಣಿತ, ಕಾರವಾರದ ಸುಗ್ಗಿ ಕುಣಿತ, ಮೈಸೂರಿನ ಕಂಸಾಳೆ, ನಗಾರಿ ತಂಡ, ರಾಯಚೂರಿನ ಕಣಿವಾದನ, ಚಾಮರಾಜನಗರದ ಗೊರವರ ಕುಣಿತ, ಬೆಳಗಾವಿಯ ಲಂಬಾಣಿ ನೃತ್ಯ, ಹಾಸನದ ಚಿಟ್ಟಿಮೇಳ, ಕಾಸರಗೋಡಿನ ದುಡಿನದನ, ಮಡಿಕೇರಿಯ ಕೊಡವ ನೃತ್ಯ ತಂಡಗಳು ಮೆರವಣಿಗೆಯ ವೈಭವ ಹೆಚ್ಚಿಸಿದವು.

ಕನ್ನಡ ಭುವನೇಶ್ವರಿಯ ಟ್ಯಾಬ್ಲೊ, ಶಂಖ ದಾಸರು, ಜಾನಪದ ಗೊಂಬೆ, ಮರಕಾಲು ಹುಲಿ ವೇಷ, ಕಂಗೀಲು ನೃತ್ಯ, ಸಾಂಪ್ರದಾಯಿಕ ವಾದನ, ಮಂಗಳ ವಾದ್ಯ, ತಟ್ಟಿರಾಯ, ಬೇತಾಳ, ಚೆಂಡೆ ತಂಡಗಳು ಸೇರಿದಂತೆ ರಾಜ್ಯದ ನಾನಾ ಜಿಲ್ಲೆಯ ಸಾಂಸ್ಕೃತಿಕ ತಂಡಗಳು ಭಾಗವಹಿಸಿದವು. ನಗರದ ನೆಹರು ಮೈದಾನದಲ್ಲಿ ಮಂಗಳೂರು ಮೇಯರ್ ಭಾಸ್ಕರ್ ಕೆ. ಅವರು ಕರಾವಳಿ ಉತ್ಸವ ಮೆರವಣಿಗೆಯನ್ನು ದೀಪಬೆಳಗಿ ಉದ್ಘಾಟಿಸಿ ಶುಭ ಹಾರೈಸಿದರು. ಬಳಿಕ ಜಿಲ್ಲಾಧಿಕಾರಿ ಸಸಿಕಾಂತ್ ಸೆಂಥಿಲ್, ಮೇಯರ್ ಭಾಸ್ಕರ್ ಕೆ. ತೆಂಗಿನಕಾಯಿ ಒಡೆಯುವ ಮೂಲಕ ಮೆರವಣಿಗೆಗೆ ವಿದ್ಯುಕ್ತ ಚಾಲನೆ ನೀಡಿದರು.

**ಹೆಜ್ಜೆ ಹಾಕಿದ ವಿದ್ಯಾರ್ಥಿನಿಯರು:** ನಗರದ ಶಾಲಾ-ಕಾಲೇಜುಗಳ 300ಕ್ಕೂ ಅಧಿಕ ವಿದ್ಯಾರ್ಥಿಗಳು, ಸ್ಕೌಟ್-ಗೈಡ್ಸ್ ವಿದ್ಯಾರ್ಥಿಗಳು ಮೆರವಣಿಗೆಯಲ್ಲಿ ಭಾಗವಹಿಸಿ ಗಮನಸೆಳೆದರು. ಬ್ಯಾಂಡ್-ವಾದ್ಯ ನಿನಾದಕ್ಕೆ ಗೊಂಬೆ ಕುಣಿತಗಳ ಜತೆ ವಿದ್ಯಾರ್ಥಿನಿಯರು ಹೆಜ್ಜೆ ಹಾಕಿದರು. ನೆಹರು ಮೈದಾನದಿಂದ ಹೊರಟ ಮೆರವಣಿಗೆ ಹಂಪನಕಟ್ಟೆ, ಕೆ.ಎಸ್. ರಾವ್ ರಸ್ತೆ, ಬೆಸೆಂಟ್, ಎಂ.ಜಿ. ರೋಡ್ ಮೂಲಕ ಕರಾವಳಿ ಉತ್ಸವ ಮೈದಾನಕ್ಕೆ ತೆರಳಿತು.

**ಟ್ರಾಫಿಕ್ ಬ್ಲಾಕ್:** ಸಂಜೆ ಹೊತ್ತಾದ ಕಾರಣ ಮೆರವಣಿಗೆ ಹಾದುಹೋಗುವ ರಸ್ತೆಯ ಜತೆ ಬಂಟ್ಸ್‌ಹಾಸ್ಟೆಲ್, ಬಿಜೈ, ಹಂಪನಕಟ್ಟೆ ರಸ್ತೆಯಲ್ಲಿ ಟ್ರಾಫಿಕ್ ಬ್ಲಾಕ್ ಆಗಿದ್ದು, ಇದರಿಂದ ವಾಹನ ಸವಾರರು, ಸಾರ್ವಜನಿಕರು ತೊಂದರೆ ಅನುಭವಿಸಿದರು.

ಮಂಗಳೂರು ನಗರ ಪೊಲೀಸ್ ಕಮಿಷನರ್ ಟಿ. ಆರ್. ಸುರೇಶ್, ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎ.ಸಿ. ಭಂಡಾರಿ, ಮಂಗಳೂರು ನಗರ ಪಾಲಿಕೆ ಆಯುಕ್ತ ಮೊಹಮ್ಮದ್ ನಝೀರ್, ಮಂಗಳೂರು ತಹಸೀಲ್ದಾರ್ ಟಿ.ಡಿ. ಗುರುರಾಜ್, ಹೆಚ್ಚುವರಿ ಜಿಲ್ಲಾಧಿಕಾರಿ ಕುಮಾರ್, ಜಿಲ್ಲಾ ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಆರ್. ಸೆಲ್ವಮಣಿ, ವಾರ್ತಾಧಿಕಾರಿ ಖಾದರ್ ಷಾ, ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಹರಿಕೃಷ್ಣ ಪುನರೂರು, ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಪ್ರದೀಪ್ ಕಲ್ಕೂರಾ ಉಪಸ್ಥಿತರಿದ್ದರು.



ನೆಹರೂ ಮೈದಾನದಲ್ಲಿ ಕರಾವಳಿ ಉತ್ಸವದ ಮೆರವಣಿಗೆಯ ಅದ್ದೂರಿ ಉದ್ಘಾಟನೆ ನಡೆಯಿತು.



**ಗಮನ ಸೆಳೆದ ಸಹ್ಯಾದ್ರಿ ತಂಡ**

ಮೆರವಣಿಗೆಯಲ್ಲಿ ಭಾಗವಹಿಸಿದ ಅಡ್ಯಾರ್ ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳ ತಂಡ ಮೆರವಣಿಗೆಯಲ್ಲಿ ವಿಶೇಷ ಗಮನ ಸೆಳೆಯಿತು. ಸುಮಾರು 56 ವಿದ್ಯಾರ್ಥಿಗಳು ಬಿಹಾರಿ, ಪಂಜಾಬಿ, ಕೇರಳ, ರಾಜಸ್ತಾನಿ, ಮರಾಠಿ, ಕಾಶ್ಮೀರಿ, ಗುಜರಾತಿ ಸೇರಿದಂತೆ 28 ರಾಜ್ಯಗಳನ್ನು ಪ್ರತಿನಿಧಿಸುವ ಸಾಂಪ್ರದಾಯಿಕ ಉಡುಗೆತೊಟ್ಟು ಮಿಂಚಿದರು.

### ಮೆರವಣಿಗೆಯಲ್ಲಿ ಗಮನಿಸಿದ್ದು...!

- ಮೆರಣಿಗೆಯಲ್ಲಿ ಆರಂಭದಲ್ಲಿ ಶಂಖ, ಕೊಂಬು, ಕಹಳೆ ಗಮನಸೆಳೆಯಿತು.
- ಸಿಡಿಮದ್ದು ಸದ್ದು ಕೂಡಾ ಮೆರವಣಿಗೆಗೆ ಕಳೆ ತಂದಿತ್ತು.
- ಮೀನುಗಾರಿಕಾ ಇಲಾಖೆಯ ಸ್ತಬ್ಧಚಿತ್ರ ಹೊರತುಪಡಿಸಿದರೆ ಇನ್ಯಾವುದೇ ಟ್ಯಾಬ್ಲೋ ಇರಲಿಲ್ಲ.
- ಕರಾವಳಿ ಕಲಾತಂಡಗಳ ಸಂಖ್ಯೆ ಕಡಿಮೆಯಿತ್ತು.



- ಮೆರವಣಿಗೆಯಲ್ಲಿ ವಿದ್ಯಾರ್ಥಿಗಳೇ ಅಧಿಕವಾಗಿದ್ದರು.

ಕರಾವಳಿ ಉತ್ಸವ ಮಂಗಳೂರಿನ ಬ್ರ್ಯಾಂಡ್, ಶೈಲಿ. ಈ ಉತ್ಸವ ಮುಖೇನ ಮಂಗಳೂರಿನ ಕಲೆ, ಸಂಸ್ಕೃತಿಯ ಸೊಬಗನ್ನು ಇಂದಿನ ಜನಾಂಗಕ್ಕೆ ಪರಿಚಯಿಸುವ ಕೆಲಸವನ್ನು ಮಾಡಲಾಗುತ್ತಿದೆ. ಈ ನೆಲದ ಕಲೆಯ ಜತೆ ಹೊಸತನವನ್ನು ಪ್ರಸ್ತುತಪಡಿಸುವ ಕೆಲಸವೂ ಈ ಉತ್ಸವದ ಮುಖೇನ ನಡೆಯುತ್ತಿದೆ. ಈ ಉತ್ಸವದಲ್ಲಿ ಎಲ್ಲರೂ ಪಾಲ್ಗೊಂಡಾಗ ಹೆಚ್ಚು ಅರ್ಥಪೂರ್ಣ ಮತ್ತು ಸಾರ್ಥಕತೆ.
**-ಸಸಿಕಾಂತ್ ಸೆಂಥಿಲ್**, ಜಿಲ್ಲಾಧಿಕಾರಿ, ದ. ಕ.

ಕರಾವಳಿ ಉತ್ಸವ ಈ ನೆಲದ ಸಂಸ್ಕೃತಿಯ ಪ್ರತೀಕ. ಈ ರೀತಿಯ ಕಾರ್ಯಕ್ರಮಗಳು ಹೆಚ್ಚು ಹೆಚ್ಚು ನಡೆಯಬೇಕು. ಈ ಕಾರ್ಯಕ್ರಮದಲ್ಲಿ ಎಲ್ಲರೂ ಸಂಘಟಿತರಾಗಿ ಭಾಗವಹಿಸಿದಾಗ ಈ ಉತ್ಸವದಲ್ಲಿ ಮತ್ತಷ್ಟು ಕಳೆ ಸಾಧ್ಯ.
**- ಭಾಸ್ಕರ್ ಕೆ.**, ಮೇಯರ್, ಮಂಗಳೂರು

ಕರಾವಳಿ ಉತ್ಸವ ಈ ನಗರಕ್ಕೊಂದು ಹೆಮ್ಮೆಯ ಉತ್ಸವ. ಇನ್ನು 10 ದಿನಗಳ ಕಾಲ ಈ ಉತ್ಸವ ಕರಾವಳಿ ಉತ್ಸವ ಮೈದಾನ, ಬೀಚ್, ಕದ್ರಿ ಪಾರ್ಕ್‌ಗಳಲ್ಲಿ ನಡೆಯಲಿದ್ದು ಇದರಲ್ಲಿ ಎಲ್ಲರೂ ಉತ್ಸಾಹದಿಂದ ಭಾಗವಹಿಸುವಂತಾಗಬೇಕು. ಈ ಉತ್ಸವ ಮೂಲಕ ಕರಾವಳಿ ವೈವಿಧ್ಯ ಕಲೆಗಳನ್ನು ಪರಿಚಯಿಸುವ ಕೆಲಸವಾಗುತ್ತಿದೆ. ನಿಜಕ್ಕೂ ತುಂಬಾ ಖುಷಿ ನೀಡುವ ಉತ್ಸವ ಇದಾಗಿದೆ.
**-ಟಿ.ಆರ್. ಸುರೇಶ್**, ಪೊಲೀಸ್ ಕಮಿಷನರ್, ಮಂಗಳೂರು ನಗರ





